**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :6 ಸಿಡಬ್ಲು :11

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಹನಮಂತ ಶ್ರೀಮಂತ ಬಾಬನ್ನವರ |
| ತಂದೆಯ ಹೆಸರು | : ಶ್ರೀ.ಶ್ರೀಮಂತ ಬಾಬನ್ನವರ |
| ವಯಸ್ಸು | : 48 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 29-10-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಪ್ರಾಸಾಃ 1 ನೇಮಿನಾಥ ಬಾಬನ್ನವರ ನನಗೆ ಗೊತ್ತಿರುತ್ತಾರೆ. ಚಾಸಾಃ 6 ರಿಂದ ಚಾಸಾಃ 8 ರವರು ನನಗೆ ಪರಿಚಯ ಇರುತ್ತಾರೆ. ಆರೋಪಿತರೆಲ್ಲರೂ ನನಗೆ ಪರಿಚಯ ಇರುತ್ತಾರೆ.

2. ಮುಗಳಖೋಡದಲ್ಲಿರುವ ನಿವೇಶನ ಸಂಖ್ಯೆ 643 ನಮಗೆ ನಮ್ಮ ಹಿರಿಯರಿಂದ ಬಂದ ಸ್ವತ್ತಾಗಿರುತ್ತದೆ. ಅದರಲ್ಲಿ ಕಟ್ಟಡ ಕಟ್ಟಲು ನಾವು ಪುರಸಭೆಯಿಂದ ಅನುಮತಿ ಪಡೆದುಕೊಂಡಿದ್ದೇವು. ದಿನಾಂಕಃ 26-08-2017 ರಂದು ನಾನು, ಚಾಸಾಃ1 ನೇಮಿನಾಥ, ಚಾಸಾಃ 6 ಶ್ರೀಕಾಂತ, ಚಾಸಾಃ 7 ಅರಿಹಂತ, ಚಾಸಾಃ 8 ಪೊನ್ನಂಜಿ, ಚಾಸಾಃ9 ಪ್ರವೀಣ ಮತ್ತು ಇಬ್ಬರು ಕೆಲಸಗಾರರು ಸೇರಿ ನಿವೇಶನ ಸಂಖ್ಯೆ 643 ರಲ್ಲಿ ಕಟ್ಟಡ ಕಟ್ಟುವ ಸಲುವಾಗಿ ಪೂಜೆ ಮಾಡಲು ಹೋಗಿದ್ದೇವು. ಮಾದರ ಸಮಾಜದವರು ಕಟ್ಟಡ

ಕಟ್ಟಬಾರದು ಎಂದು ನಮಗೆ ತಕರಾರು ಮಾಡಿದರು. ಪ್ರಕಾಶ ಕಡಕೋಳ ಎನ್ನುವವರು ಜಾರಿ ಕೆಳಗೆ ಬಿದ್ದರು, ಅವರನ್ನು ಎಬ್ಬಿಸಲು ಚಾಸಾಃ 1 ನೇಮಿನಾಥ, ಚಾಸಾಃ 8 ಪ್ರೊನ್ನಂಜಿ, ಚಾಸಾಃ 7 ಅರಿಹಂತ ರವರು ಹೋಗಿದ್ದರು, ಆ ಸಮಯಕ್ಕೆ ಮಾದರ ಸಮಾಜದ ಸುಮಾರು ಜನರು ಕಲ್ಲು, ಕಟ್ಟಿಗೆ, ಕಬ್ಬಿಣದ ಸರಳುಗಳನ್ನು ಹಿಡಿದುಕೊಂಡು ಬಂದು ಇದು ನಮ್ಮ ಜಾಗ ಇದೆ ಇಲ್ಲಿ ಕಟ್ಟಡ ಕಟ್ಟಬಾರದು ಎಂದು ಹೇಳಿದರು, ನಾವು ನಮ್ಮ ಜಾಗ ಇದೆ, ನಾವು ಕಟ್ಟಡ ಕಟ್ಟುತ್ತೇವೆ ಎಂದು ಹೇಳಿದ್ದರಿಂದ ಅವರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು. ಚಾಸಾಃ 1 ನೇಮಿನಾಥ ಅವರಿಗೆ ವಿಠ್ಠಲ ಎನ್ನುವವರು ಕಲ್ಲಿನಿಂದ ತಲೆಗೆ ಹೊಡೆದರು ಮತ್ತು ಕಲ್ಲಿನಿಂದ ಕಾಲಿಗೆ ಹೊಡೆದರು. ಚಾಸಾಃ 6 ಶ್ರೀಕಾಂತ ಅವರಿಗೆ ಕಾಲಿಗೆ ಪೆಟ್ಟಾಗಿತ್ತು, ಅಲ್ಲಿ ಬಹಳ ಜನರು ಸೇರಿದ್ದರಿಂದ ಯಾರು ಯಾರಿಗೆ ಹೊಡೆದರು ಎಂದು ಗೊತ್ತಾಗುತ್ತಿರಲಿಲ್ಲ.

3. ಚಾಸಾಃ 7 ಅರಿಹಂತ ಅವರಿಗೆ ಭೀಮಪ್ಪ ಅವರು ಕಬ್ಬಿಣದ ಸರಳಿನಿಂದ ಕೈಗೆ ಹೊಡೆದರು. ವಿಠ್ಠಲ ಅವರು ಅರಿಹಂತ ಅವರಿಗೆ ಕಲ್ಲಿನಿಂದ ಹೊಡೆದರು. ಚಾಸಾಃ 9 ಪ್ರವೀಣ ಅವರಿಗೆ ಕಾಲಿಗೆ ಪೆಟ್ಟಾಗಿತ್ತು, ಯಾರು ಹೊಡೆದರು ಎಂದು ಗೊತ್ತಾಗಿರುವುದಿಲ್ಲ. ಚಾಸಾಃ14 ಮಿಲನ ಅವರಿಗೆ ಕಲ್ಲಿನಿಂದ ತಲೆಗೆ ಪೆಟ್ಟಾಗಿದ್ದು, ರಕ್ತ ಗಾಯ ಆಗಿತ್ತು. ಚಾಸಾಃ 15 ಮಲ್ಲು ಕುರಾಡೆ ಅವರಿಗೆ ಗದ್ದದ ಮೇಲೆ ಕಲ್ಲಿನಿಂದ ಹೊಡೆದ ಗಾಯ ಆಗಿತ್ತು.

4. ನಾನು, ಚಾಸಾಃ 13 ರಾಮಚಂದ್ರ ಕುರಾಡೆ, ಚಾಸಾಃ 10 ಅಜಿತ ಬಾಬನ್ನವರ ಮತ್ತು ನಾನು ಜಗಳ ಬಿಡಿಸಿದೇವು. ಆರೋಪಿತರು ಕಲ್ಲು, ಕಟ್ಟಿಗೆ, ಕಬ್ಬಿಣದ ಸರಳುಗಳನ್ನುಸ್ಥಳದಲ್ಲಿಯೇ ಬಿಸಾಡಿ ಹೋದರು, ಆ ರೀತಿ ಹೋಗುವಾಗ ಇನ್ನೊಮ್ಮೆ ಕಟ್ಟಡ ಕಟ್ಟಲು ಬಂದರೆ ನಿಮ್ಮನ್ನು ಕೊಂದು ಹಾಕುತ್ತೇವೆ ಎಂದು ಬೆದರಿಕೆ ಹಾಕಿದರು.

5. ಗಾಯಾಳುಗಳನ್ನು ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಜಗಳದ ಬಗ್ಗೆ ನೇಮಿನಾಥ ಬಾಬನ್ನವರ ಅವರು ದೂರು ಕೊಟ್ಟಿದ್ದಾರೆ.

6. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಂಬೂ ಬಡಿಗೆ, ಕಲ್ಲುಗಳು, ಕಬ್ಬಿಣದ ಸರಳುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅವುಗಳನ್ನು ಮು.ಮಾ.1 ರಿಂದ ಮು.ಮಾ.4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ನಿವೇಶನ ಸಂಖ್ಯೆ 643 ನಮ್ಮ ಹಿರಿಯರಿಂದ ಬಂದ ಆಸ್ತಿ ಎನ್ನವ ಬಗ್ಗೆ ನಾನು ನಮ್ಮ ಮುತ್ತಜ್ಜನ, ನಮ್ಮ ಅಜ್ಜನ ಹೆಸರಿನಲ್ಲಿರುವ ದಾಖಲೆಗಳನ್ನು ನೋಡಿದ್ದೇನೆ. ಸಾಕ್ಷಿ ಮುಂದುವರೆದು ಆ ಬಗ್ಗೆ ಉತಾರೆಗಳು ಇವೆ ಎಂದು ಹೇಳಿದ್ದಾರೆ. ಸದರಿ ನಿವೇಶನ ಸಂಖ್ಯೆ 643 ರ ದಾಖಲೆಯನ್ನು ವಾರಸುದಾರರ ಪ್ರಕಾರವಾಗಿ ನಾವು ನಮ್ಮ ಹೆಸರುಗಳಿಗೆ ಖಾತೆಗಳನ್ನು ಮಾಡಿಸಿಕೊಂಡಿದ್ದೇವೆ. ತನಿಖಾ ಕಾಲದಲ್ಲಿ ಪೋಲಿಸರಿಗೆ ನಿವೇಶನಕ್ಕೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ನೀಡಿದ್ದೇವೆ.

2. ಕಟ್ಟಡದ ಪೂಜೆಗಾಗಿ ನಾವು ತೆಂಗಿನಕಾಯಿ, ಪಂಚಪರಾಳ, ಹೂ, ಉದಿನಕಡ್ಡಿ ಮತ್ತು ಕರ್ಪೂರ ತೆಗೆದುಕೊಂಡು ಹೋಗಿದ್ದೇವು. ಪೂಜೆ ಆದ ನಂತರ ಅವುಗಳನ್ನು ಸ್ಥಳದಲ್ಲಿಯೇ ಇರಿಸಿದ್ದೇವು. ಪೂಜೆ ಕಾರ್ಯಕ್ಕೆ ನಾವು ಸುಮಾರು 7-8 ಜನರು ಮಾತ್ರ ಹೋಗಿದ್ದೇವು. ನಮ್ಮ ಕುಟುಂಬ ಸದಸ್ಯರಾದ ಬಾಹುಬಲಿ ಹುಲ್ಲೋಳ್ಳಿ ಮತ್ತು ಇನ್ನೊಬ್ಬರು ಅಬಕಾರಿ ಅಧಿಕಾರಿಯಾಗಿದ್ದು ಅವರು ಬಂದಿದ್ದರು ಎನ್ನುವುದು ಸರಿಯಲ್ಲ. ನಾವು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ನಮ್ಮ ಕುಟುಂಬದಿಂದ ಅಬಕಾರಿ ಅಧಿಕಾರಿಯಾಗಿದ್ದವರೂ ಸಹ ಬಂದಿದ್ದರು ಎಂದು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

3. ನಿವೇಶನ ಸಂಖ್ಯೆ 643 ರ ಒಂದು ಭಾಗದಲ್ಲಿ ರಸ್ತೆ ಇದ್ದು, ಇನ್ನೊಂದು ಭಾಗದಲ್ಲಿ ಮಾದರ ಸಮಾಜಕ್ಕೆ ಸೇರಿದವರ ಮನೆಗಳು ಇವೆ ಎನ್ನುವುದು ಸರಿ. ನಿವೇಶನ ಸಂಖ್ಯೆ 643 ರಿಂದ 2-3 ಕಿಲೋಮೀಟರ ದೂರದಲ್ಲಿ ನಮ್ಮ ಸಮಾಜದವರ ಹಾಗೂ ಚಾಸಾಃ 14 ಮತ್ತು ಚಾಸಾಃ 15 ರವರ ಮನೆ ಇದೆ ಎನ್ನುವುದು ಸರಿ.

4. ದಿನಾಂಕಃ 26-08-2017 ರಂದು ನಾನು, ಚಾಸಾಃ1 ನೇಮಿನಾಥ, ಚಾಸಾಃ 6 ಶ್ರೀಕಾಂತ, ಚಾಸಾಃ 7 ಅರಿಹಂತ, ಚಾಸಾಃ 8 ಪೊನ್ನಂಜಿ, ಚಾಸಾಃ 9 ಪ್ರವೀಣ ಮತ್ತು ಇಬ್ಬರು ಕೆಲಸಗಾರರು ಸೇರಿ ನಿವೇಶನ ಸಂಖ್ಯೆ 643 ರಲ್ಲಿ ಕಟ್ಟಡ ಕಟ್ಟುವ ಸಲುವಾಗಿ ಪೂಜೆ ಮಾಡಲು ಹೋಗಿದ್ದೇವು, ಮಾದರ ಸಮಾಜದವರು ಕಟ್ಟಡ ಕಟ್ಟಬಾರದು ಎಂದು ನಮಗೆ ತಕರಾರು ಮಾಡಿದರು, ಆರೋಪಿತರೆಲ್ಲರೂ ನಮ್ಮ ಸಮಾಜದವರಿಗೆ ಮು.ಮಾ.1 ರಿಂದ ಮು.ಮಾ.4 ರಿಂದ ಹೊಡೆದು ಹಲ್ಲೆ ಮಾಡಿದರು ಎಂದು, ನಾನು ಜಗಳ ಬಿಡಿಸಿದೆನು ಎಂದು, ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ನಿವೇಶನ ಸಂಖ್ಯೆ 643 ಮಠಕ್ಕೆ ಮತ್ತು ಬಸ್ ಸ್ಟ್ಯಾಂಡ್‌ಗೆ ಸಮೀಪವಾಗಿದ್ದು, ಬೆಲೆ ಬಾಳುವ ಆಸ್ತಿಯಾಗಿದ್ದು, ಅದು ಮಾದರ ಸಮಾಜದವರ ಸ್ವಾಧೀನದಲ್ಲಿದ್ದರೂ ಸಹ, ಅವರನ್ನು ಆ ಸ್ಥಳದಿಂದ ಬಿಡಿಸುವ ಉದ್ದೇಶದಿಂದ ನಮ್ಮ ಸಮಾಜದವರು ಅವರ ಮೇಲೆ ಹಲ್ಲೆ ಮಾಡಿ ಮಾದರ ಸಮಾಜದವರು ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ದೂರನ್ನು ನೀಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ**
**ಶ್ರೀ.ಎಮ್.ಜಿ.ಬಿ ವಕೀಲರಿಂದ ಶ್ರೀ.ಆರ್.ಕೆ.ಬಿ ವಕೀಲರ ಪರವಾಗಿ**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು, 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಎಮ್.ಜಿ.ಬಿ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.